

ಬಣ್ಣ, ಅವು ಒಂದೊಂದು ಭಾವದ ಪ್ರತಿನಿಧಿ. ಒಂದು ಉಗುರಿನ ಕುಸುರಿಗಿಂತ ಇನ್ನೊಂದು ಭಿನ್ನ. ಸಿಂಪಲ್ ಪಾಲಿಷ್, ಗ್ಲಿಟರ್, ಡಾಟ್, ಫ್ರೆಂಚ್ ಟಿಪ್ಸ್‌ಗಳ ಸಮ್ಮಿಳಿತವು ಸಹಜ ಸ್ನಿಗ್ಧ ಸೌಂದರ್ಯ ನೋಟ ಬೀರುತ್ತದೆ. ಕ್ರೋಮ್ ಪೌಡರ್ ಬಳಸಿ ವಿನ್ಯಾಸ ಮಾಡುವ ಚಿತ್ರಗಳು ಹೊಳಪು ನೀಡುತ್ತವೆ. ಯುವತಿಯರು ಈ ಕ್ರೋಮ್ ಫಿನಿಷ್ ಅನ್ನು ಇಷ್ಟಪಡುತ್ತಾರೆ. ಮ್ಯಾಗ್ನೆಟಿಕ್ ಫಿನಿಷ್ ಅನ್ನು ಇಷ್ಟಪಡುವವರೂ ಇದ್ದಾರೆ. ಮ್ಯಾಗ್ನೆಟಿಕ್ ಫಿನಿಷ್‌ನ ಹಸ್ತಾಲಂಕಾರವು ಓರೆನೋಟದಲ್ಲಿ ನವಿರಾದ ಚಿತ್ರಗಳನ್ನು ಕಣ್ಣಿನಲ್ಲಿಳಿಸುತ್ತದೆ ಎನ್ನುತ್ತಾರೆ ನೇಲ್ ಆರ್ಟ್ ಕಲಾವಿದೆ ಪ್ರಿಯಾ.



ತಿಳಿಯಾದ ನೇಲ್ ಪಾಲಿಷ್ ಲೇಪಿಸಿ ಜೆಲ್ ವರ್ಕ್ಸ್, ಚಾರ್ಮ್‌ಗಳನ್ನು ಅಂಟಿಸುವುದು, ಪಾಂಡಾ, ಜೇಡದಂತಹ ಪುಟ್ಟ ಪ್ರಾಣಿಗಳ ಬಿಂಬ, ಚಿರತೆ ಪಟ್ಟೆ, ಪದರು ವಿನ್ಯಾಸದ ಚಿತ್ರಗಳು, ಕ್ಯಾಟ್ ಐ, 3ಡಿ ಚಿತ್ರಗಳು, ಭಾವಾಭಿವ್ಯಕ್ತಿಯ ಅಮೂರ್ತ ಚಿತ್ರಗಳನ್ನು ತಮ್ಮ ಭಾವ ವಿಹಾರಕ್ಕೆ ತಕ್ಕಂತೆ ಚಿತ್ರಿಸಿಕೊಡುವಂತೆ ಬೇಡಿಕೆ ಇಡುವವರು ಇದ್ದಾರೆ. ಕಸ್ಟಮೈಸ್ ಕಲೆ ಇಷ್ಟಪಡುವವರೂ ಅನೇಕರು. ಗಾಢ ವರ್ಣ ನೆಚ್ಚಿಕೊಳ್ಳುವವರೂ ಇದ್ದಾರೆ. ನೇಲ್ ಆರ್ಟ್‌ನಲ್ಲಿ ಅಕ್ರಿಲಿಕ್, ಗ್ಲಿಟರ್, ಜೆಲ್ ಬಳಕೆ ಮಾಡುತ್ತೇವೆ. ಜೆಲ್‌ಗಿಂತ ಅಕ್ರಿಲಿಕ್ ಹೆಚ್ಚು ಬಾಳಿಕೆ ಬರುತ್ತದೆ. ನೇಲ್ ಆರ್ಟ್ ಎಂಬುದು ಕಲೆ ಅರಳಿಸುವ ಕ್ಯಾನ್ವಾಸ್ ಇದ್ದಂತೆ. ಸಾವಿರಾರು ಮಾದರಿಗಳಲ್ಲಿ ಅವುಗಳನ್ನು ಸೃಷ್ಟಿಸಬಹುದು ಎನ್ನುತ್ತಾರೆ ಅವರು.

### ಸ್ಟಿಕರ್‌ಗಳ ಸಮ್ಮೋಹನ

ಥೀಮ್‌ಗೆ ಅನುಗುಣವಾಗಿ ನಖದ ವಿನ್ಯಾಸಗಳು ಭಿನ್ನವಾಗಿರುತ್ತವೆ. ಡೆಸ್ಟಿನೇಷನ್ ವೆಡ್ಡಿಂಗ್, ಕಾರ್ಪೊರೇಟ್ ವೆಡ್ಡಿಂಗ್, ಹಳ್ಳಿಮನೆಯ ಮದುವೆ, ಬ್ರೈಡ್ ಟು ಬಿ, ಜನುಮ ದಿನದ ಆಚರಣೆ, ನೈಟ್ ಔಟ್, ಕಿಟ್ಟಿ ಪಾರ್ಟಿ, ಧಾರ್ಮಿಕ ಸಮಾರಂಭ, ಪ್ರವಾಸ ಹೀಗೆ ಥೀಮ್ ಆಧರಿಸಿ ನೇಲ್ ಆರ್ಟ್ ಮಾದರಿಗಳು ಬದಲಾಗುತ್ತವೆ. ನೇಲ್ ಆರ್ಟ್ ಸ್ಟಿಕರ್‌ಗಳು ಹೆಚ್ಚು ಟ್ರೆಂಡಿಂಗ್‌ನಲ್ಲಿವೆ. ಅಷ್ಟೊಂದು ಮೋಹಕವಲ್ಲದ ಉಗುರುಗಳಿಗೆ ಎಕ್ಸ್‌ಟೆನ್ಶನ್ (ವಿಸ್ತರಣೆ) ಬಳಸಿ ಸಮ್ಮೋಹಕಗೊಳಿಸುವ ವಿಧಾನವೂ ಪ್ರಚಲಿತದಲ್ಲಿದೆ. ಇವು ತಿಂಗಳವರೆಗೂ ಹಾಳಾಗುವುದಿಲ್ಲ ಎನ್ನುತ್ತಾರೆ ಮದುವೆ ಸಿದ್ಧತೆ ನಡೆಸಿರುವ ಅಪೂರ್ವ ಭಟ್.



ಫೇಕ್ ನೇಲ್ಸ್ (ನಕಲಿ ಉಗುರು) ಜೋಡಿಸಿ, ಅದರ ಮೇಲೆ ವಿವಿಧ ಸ್ಟಿಕರ್‌ಗಳನ್ನು ಅಂಟಿಸಬಹುದು. ಯುವಿ ಲೈಟ್ ಹಾಯಿಸಿದರೆ, ಇವು ಗಟ್ಟಿಯಾಗುತ್ತವೆ. ನಂತರ ಇದನ್ನು ಬೇಕಾದಂತೆ ವಿನ್ಯಾಸಗೊಳಿಸಬಹುದು. ಸಂಭ್ರಮಾಚರಣೆಯ ವೈಬ್ ಸೃಷ್ಟಿಸುವಲ್ಲಿ ನೇಲ್ ಆರ್ಟ್ ಒಂದು ಹೆಜ್ಜೆ ಮುಂದೆ ಎಂದು ಅವರು ಅನುಭವ ಹಂಚಿಕೊಂಡರು.

ನೇಲ್ ಆರ್ಟ್ ಎನ್ನುವುದು ಸಣ್ಣ ಖರ್ಚಿನ ದೊಡ್ಡ ಖುಷಿ. ಸೃಜನಶೀಲತೆಗೊಂದು ಸವಾಲು. ಕುಂಚ ಹಿಡಿದು ಕಲಾಲೋಕವನ್ನೇ ಸೃಷ್ಟಿಸಬಹುದು.



ಗಾಢ ವರ್ಣದ ನಖ ವಿನ್ಯಾಸ

ಸಾಮಾಜಿಕ ಜಾಲತಾಣಗಳಲ್ಲಿ ನೇಲ್ ಆರ್ಟ್ ಚಿತ್ರಗಳು, ವಿಡಿಯೊಗಳು ಹೆಚ್ಚು ಶೇರ್ ಆಗುತ್ತವೆ. ತಂತ್ರಜ್ಞಾನವೂ ನಖ ವಿನ್ಯಾಸಕ್ಕೆ ಪೂರಕವಾಗಿದೆ. ವಿನ್ಯಾಸದ ಪರಿಕರಗಳು, ನೇಲ್ ಪಾಲಿಷ್‌ಗಳ ಬಣ್ಣ ವೈವಿಧ್ಯ, ಅವುಗಳಲ್ಲಿ ಮ್ಯಾಟ್ ಪಾಲಿಷ್, ಮ್ಯಾಗ್ನೆಟಿಕ್ ಪಾಲಿಷ್, ಗ್ಲಿಟರ್, ಜೆಲ್ ಹೀಗೆ ಮತ್ತೆ ಪುನರ್ ವಿಂಗಡಣೆಯ ಆಯ್ಕೆಗಳಿವೆ ಎನ್ನುತ್ತಾರೆ ನೇಲ್ ಆರ್ಟ್ ಬಗ್ಗೆ ಅತೀವ ಆಸಕ್ತಿ ಹೊಂದಿರುವ ಯುವತಿ ಸಾನ್ಯಾ.

ನೇಲ್ ಪಾಲಿಷ್ ದುಬಾರಿ ಎನಿಸಿದರೆ ಕಡಿಮೆ ಖರ್ಚಿನ ಪ್ರೆಸ್ ಆನ್ ಬಳಸಬಹುದು. ₹60ರಿಂದ ₹1000ವರೆಗಿನ ಪ್ರೆಸ್ ಆನ್‌ಗಳೂ ಲಭ್ಯ ಇವೆ. ಉಗುರಿನ ಸೌಂದರ್ಯಕ್ಕಾಗಿ ತಿಂಗಳಿಗೆ ₹25 ಸಾವಿರ ಖರ್ಚು ಮಾಡುವವರೂ ಇದ್ದಾರೆ. ನಾನು ನೇಲ್ ಆರ್ಟ್ ಕಲೆ ಕರಗತ ಮಾಡಿಕೊಂಡು ವಾರ, ಎರಡು ವಾರಕ್ಕೊಮ್ಮೆ ಥೀಮ್ ಬದಲಾಯಿಸುತ್ತೇನೆ. ಇದಕ್ಕಾಗಿ ನನಗೆ ತಿಂಗಳಿಗೆ ಖರ್ಚಾಗುವ ಮೊತ್ತ ಹೆಚ್ಚೆಂದರೆ ₹150 ಎನ್ನುತ್ತಾರೆ ಅವರು.



## ನೇಲ್ ಆರ್ಟ್ ಟಿಪ್ಸ್

- ಉಗುರು ತುಂಬಾ ಉದ್ದವಾಗಿ ಇರಬಾರದು, ತೀರಾ ಚಿಕ್ಕದಾಗಿಯೂ ಇರಬಾರದು.
- ಚರ್ಮದ ಬಣ್ಣಕ್ಕೆ ಹೊಂದುವ ವರ್ಣ ಆಯ್ಕೆ ಮಾಡಿಕೊಳ್ಳಬೇಕು.
- ಉಗುರಿನ ಮೇಲೆ ಹಳೆಯ ನೇಲ್ ಪಾಲಿಷ್ ಇದ್ದರೆ ರಿಮೂವರ್ ಬಳಸಿ ನೀಟಾಗಿ ಅದನ್ನು ಅಳಿಸಬೇಕು.
- ಹದ ಬೆಚ್ಚಗಿನ ನೀರು ಅಥವಾ ಲಿಂಬೆ ಹಣ್ಣಿನ ರಸದಲ್ಲಿ ಕೆಲ ಹೊತ್ತು ಕೈಯಿಟ್ಟುಕೊಂಡರೆ ಉಗುರುಗಳಿಗೆ ಹೊಳಪು ಬರುತ್ತದೆ.
- ಜೆಲ್ ಹಚ್ಚಿದ ಉಗುರುಗಳ ಮೇಲೆ ಚಿತ್ತಾರ ಬರೆಯಲು ಬಣ್ಣದ ಪೆನ್ಸಿಲ್ ಬಳಸಬಹುದು. ಜಪಾನ್‌ನಲ್ಲಿ ನೇಲ್ ಆರ್ಟ್ ವಿನ್ಯಾಸಕಾರರು ಬಹುವರ್ಷಗಳಿಂದ ಅನುಸರಿಸುತ್ತಿರುವ ವಿಧಾನ ಇದು.
- ಬೇಸ್ ಕೋಟ್ ಹಚ್ಚಿ ನಂತರ ನೇಲ್ ಪಾಲಿಷ್ ಹಚ್ಚಿದರೆ, ಉಗುರು ಹಾಳಾಗುವುದನ್ನು ತಪ್ಪಿಸಬಹುದು.
- ಎಕ್ಸ್‌ಟೆನ್ಶನ್ ಹಾಕಿದ್ದರೆ ಕೆಲಸ ಮಾಡುವಾಗ ಎಚ್ಚರ ವಹಿಸಬೇಕು.
- ಬಣ್ಣ ಮಾಸಿದರೆ ವಿನ್ಯಾಸದ ಮೇಲೆ ಪಾರದರ್ಶಕ ಕೋಟಿಂಗ್ ಮಾಡಬಹುದು.
- ನೇಲ್ ಪಾಲಿಷ್ ಆಯ್ಕೆ ಬಹುಮುಖ್ಯ. ಕಳಪೆ ಗುಣಮಟ್ಟದ ನೇಲ್ ಪಾಲಿಷ್‌ನಿಂದ ಉಗುರಿನ ಬಣ್ಣ ಬದಲಾಗಬಹುದು.
- ಹೆಚ್ಚು ರಾಸಾಯನಿಕ ಬಳಸುವಾಗ ಬೆರಳುಗಳ ಆರೋಗ್ಯದ ಬಗ್ಗೆ ಎಚ್ಚರವಿರಲಿ.